# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 153 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-07-2024 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ನಗರದಲ್ಲಿ ದಿನಾಂಕ: 12.06.2024, 13.06.2024 ಮತ್ತು 14.06.2024 ರಂದು (3 ದಿನಗಳು) ಸುರಿದ ಮಳೆಯಿಂದ ಬಹುತೇಕ ಪ್ರದೇಶಗಳಲ್ಲಿ ವಾಣಿಜ್ಯ ಸಂಕೀರ್ಣಗಳು ಮತ್ತು ಮನೆಗಳು ಜಲಾವೃತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಸ್ಮಾರ್ಟ್ ಸಿಟಿಯ ಯೋಜನೆಯಲ್ಲಿ 2019 ರಿಂದ 2023 ರವರೆಗೆ ನಡೆದ ಕಾಮಗಾರಿಗಳು ಕಳಪೆ/ ಅವೈಜ್ಞಾನಿಕವಾಗಿರುವುದರಿಂದ ಈ ರೀತಿಯ ಅವಾಂತರಗಳು ಆಗುತ್ತಿರುವುದು ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಭ್ರಷ್ಟಾಚಾರದ ಕಾರಣದಿಂದಲ್ಲವೇ; | ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಸ್ಮಾರ್ಟ್ ಸಿಟಿ ಅನುದಾನದಡಿ ರೂ.936 ಕೋಟಿ ಮೊತ್ತದ 110 ಕಾಮಗಾರಿಗಳನ್ನು ಕೈಗೊಂಡಿದ್ದು, ಇವುಗಳ ಪೈಕಿ ರೂ.836.999 ಕೋಟಿ ಮೊತ್ತದ 100 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಬಾಕಿ ರೂ.99.01 ಕೋಟಿ ಮೊತ್ತದ 10 ಕಾಮಗಾರಿಗಳು ಪ್ರಗತಿಯಲ್ಲಿವೆ. ಕಳಪೆ ಕಾಮಗಾರಿಗಳಿರುವುದಿಲ್ಲ. |
| ಇ) | ಹಾಗಿದ್ದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಾಗುವುದೇ? | ಬೆಳಗಾವಿ ಸ್ಮಾರ್ಟ್‌ಸಿಟಿ ವತಿಯಿಂದ ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ, 12 ಉದ್ಯಾನವನಗಳ ಅಭಿವೃದ್ಧಿ, ಕಣಬರಗಿ ಹಾಗೂ ಕೋಟೆ ಕೆರೆ ಅಭಿವೃದ್ಧಿ, ನಗರ ಬಸ್ ನಿಲ್ದಾಣ ಕಟ್ಟಡ, ಮಹಿಳಾ ಮಾರುಕಟ್ಟೆ, ಕಲಾಮಂದಿರ ಬಹೂಪಯೋಗಿ ವಾಣಿಜ್ಯ ಸಂಕೀರ್ಣ ಕಟ್ಟಡ, ಇಂಟಿಗ್ರೇಟೆಡ್ ಕಮಾಂಡ್ & ಕಂಟ್ರೋಲ್ ಸೆಂಟರ್, ಸ್ಮಾರ್ಟ್ ಕ್ಲಾಸ್ ರೂಮ್ ಹಾಗೂ ಡಿಜಿಟಲ್ ಗ್ರಂಥಾಲಯಗಳು , ಬಿಮ್ಸ್ ಆಸ್ಪತ್ರೆಗೆ ಹೈಟೆಕ್ ಸಲಕರಣೆಗಳು, 2 ಪ್ರಾಥಮಿಕ ಆಸ್ಪತ್ರೆ ಅಭಿವೃದ್ಧಿ, ಸ್ಮಾರ್ಟ್ ಬಸ್ ಶೆಲ್ಟರ್ ಹೀಗೆ ಹಲವಾರು ಜನೋಪಯೋಗಿ ಪ್ರಮುಖ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>ಬೆಳಗಾವಿ ಸ್ಮಾರ್ಟ್‌ಸಿಟಿ ವತಿಯಿಂದ ನಗರದ 804.20 ಕಿ.ಮೀ ಪೈಕಿ ಒಟ್ಟು 98.99 ಕಿಮೀ ರಸ್ತೆಗಳನ್ನು ಮಾತ್ರ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದ್ದು, ಸದರಿ ರಸ್ತೆ ಅಭಿವೃದ್ಧಿಯಡಿಯಲ್ಲಿ Carraige way ಗಳ ಅಭಿವೃದ್ಧಿ ಮತ್ತು Storm Water Drain ಸೇರಿವೆ.<br><br>ಬೆಳಗಾವಿ ಸ್ಮಾರ್ಟ್‌ಸಿಟಿ ವತಿಯಿಂದ ಮುಖ್ಯವಾಗಿ ಈ ಕೆಳಗಿನ ಪ್ರದೇಶಗಳಲ್ಲಿ ಸ್ಮಾರ್ಟ್ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;<br>ಮುಖ್ಯ ರಸ್ತೆಗಳು - Hotel Sankam to Ashok circle, Ashok circle to RTO Circle, RTO circle to Channamma circle, Channamma circle to Bogarves circle, Bogarves to Gogte circle, Gogte circle to 3rd railway gate, Bank of India circle to Nath pai circle, Vadagaon circle- Navahind society RPD cross, RPD cross to 1 railway Gate, Nathpai circle to Kasturba Balikashram to Goaves circle, SP office to Dharmanath circle, KLE Hospital to Kolhapur circle, Kolhapur circle to Rani channamma circle, Kolhapur circle to Sangolli Rayanna circle, Bank of India to Old PB road, APMC junction to Kangrali KH, Angol Main road, Hotel Milan to Gandhi statue-Harsha showroom-GST office road, Mahaveer Bhavan road, Smart road at Srinagar, Ramteertha Nagar Area road, Anajaneya Nagar road, RTO to Jijamata circle, Vegetable Market road, Goaves Tinisu Katte road, SPM road, Mahatma phule road, Shukrawar peth road, 1 gate to mandoli road- Mandoli road to 2nd gate, Nanawadi road, KPTCL road. |

| | | |
|---|---|---|
| | | ಪೇವರ್ ರಸ್ತೆಗಳು- SBI colony, Raghvendra colony, Channamma Nagar 1st gate, Arjun colony, SV road Chidambar Nagar, Shastri Nagar, Mrityunjay Nagar, Rani Channamma Nagar 2nd stage, Vivekanand Nagar & Maratha colony, Kapileshwar colony Mahadva Road, Shanti Nagar.<br><br>ಈ ಕಾಮಗಾರಿಗಳನ್ನು ಸಂಪೂರ್ಣವಾಗಿ ಸ್ಮಾರ್ಟಸಿಟಿ ಮಿಷನ್‌ನ ಮಾರ್ಗಸೂಚಿಗಳನ್ವಯ ವೈಜ್ಞಾನಿಕವಾಗಿ ಅನುಷ್ಠಾನಗೊಳಿಸಲಾಗಿದೆ. ಅಲ್ಲದೇ ಕಾಮಗಾರಿಗಳ ಅನುಷ್ಠಾನ ಸಂದರ್ಭದಲ್ಲಿ ಪರಿಮಾಣ ಹಾಗೂ ಗುಣಮಟ್ಟವನ್ನು ಪ್ರತಿ ಹಂತದಲ್ಲೂ ಪರೀಕ್ಷಿಸಿ ಖಚಿತಪಡಿಸಿಕೊಂಡು ದೃಢೀಕರಿಸಲು ಯೋಜನಾ ನಿರ್ವಹಣಾ ಸಮಾಲೋಚಕರನ್ನು ನೇಮಿಸಲಾಗಿದ್ದು ಕಾಮಗಾರಿಗಳ ಅನುಷ್ಠಾನದ ಸಮಯದಲ್ಲಿ ಗುಣಮಟ್ಟ ಕಾಪಾಡಲು ಸಲಹೆ ಸೂಚನೆಗಳನ್ನು ನೀಡುತ್ತಿರುತ್ತಾರೆ ಇದರ ಜೊತೆಗೆ ಸ್ಮಾರ್ಟಸಿಟಿ ಅಭಿಯಂತರರೂ ಸಹ ಅನುಷ್ಠಾನದ ಪ್ರತಿ ಹಂತದಲ್ಲೂ ಸಹ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು ತಾಂತ್ರಿಕವಾಗಿ ದೃಢೀಕರಿಸಿರುತ್ತಾರೆ. ಅಲ್ಲದೇ ನಿರ್ದಿಷ್ಟ ದೂರು ಸ್ವೀಕೃತವಾದ ಸಂಧರ್ಭಗಳಲ್ಲಿ ಕಾಮಗಾರಿವಾರು 3ನೇ ವ್ಯಕ್ತಿ ತಪಾಸಣೆ ಮೂಲಕ ಕಾಮಗಾರಿಗಳ ಗುಣಮಟ್ಟ ಖಚಿತ ಪಡಿಸಿಕ್ಕೊಳ್ಳಲಾಗುತ್ತಿದೆ.<br><br>ಜೂನ್ 2024 ರ ಅತಿವೃಷ್ಟಿಯಲ್ಲಿ ಬೆಳಗಾವಿ ಸ್ಮಾರ್ಟ್‌ಸಿಟಿ ವತಿಯಿಂದ ಅಭಿವೃಧ್ಧಿ ಪಡಿಸಲಾದ ರಸ್ತೆಗಳಲ್ಲಿರುವ ವಾಣಿಜ್ಯ ಸಂಕೀರ್ಣಗಳು ಮತ್ತು ಮನೆಗಳು ಜಲಾವೃತಗೊಂಡಿರುವುದಿಲ್ಲ.<br><br>ಬೆಳಗಾವಿ ಸ್ಮಾರ್ಟ್‌ಸಿಟಿ ವತಿಯಿಂದ ಅಭಿವೃಧ್ಧಿ ಪಡಿಸಲಾದ ರಸ್ತೆಗಳಲ್ಲಿನ ಒಳಚರಂಡಿಗಳಲ್ಲಿ ಕಾಲಕಾಲಕ್ಕೆ ಹೂಳು ಎತ್ತಲಾಗುತ್ತಿದೆ. ಆದಾಗ್ಯೂ, ನಗರದ ಕೆಲ ಒಳ ರಸ್ತೆಗಳಿಗೆ ಹೊಂದಿಕೊಂಡ ಚರಂಡಿಗಳು ತ್ಯಾಜ್ಯಗಳಿಂದ ಮುಚ್ಚಿದ ಪರಿಣಾಮ ಅತಿ ಹೆಚ್ಚು ಮಳೆ ಸುರಿದ ಸಂದರ್ಭ ಮಳೆ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಪ್ರಸ್ತುತ ಚರಂಡಿಗಳನ್ನು ಸ್ವಚ್ಛಗೊಳಿಸಲಾಗಿದ್ದು, ಸದರಿ ಕಾರ್ಯವನ್ನು ಮಹಾನಗರ ಪಾಲಿಕೆ ಸಮನ್ವಯದಲ್ಲಿ ಮುಂದುವರೆಸಲಾಗಿದೆ.<br><br>ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಕಾಮಗಾರಿಗಳನ್ನು ಸರ್ಕಾರದ ಕಾಯ್ದೆ ಹಾಗೂ ನಿಯಮಗಳ ಅನುಸಾರ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ವೈಜ್ಞಾನಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. |

ಸಂಖ್ಯೆ: ನಅಇ 109 ಸಿಎಸ್ಎಸ್ 2024

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು